# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
# ಬ್ಯಾಟರಾಯನಪುರ ಉಪ ವಿಭಾಗ, ವಾರ್ಡ್ ನಂ. 06(ಥಣಿಸಂದ್ರ)
## ವಾರ್ಡ್‌ಸಮಿತಿಸಭೆ, ದಿನಾಂಕ: 21–05–2022ರ
## ಸಭಾ ನಡುವಳಿ

**ದಿನಾಂಕ: 21–05–2022ರಂದು ಬೆಳ್ಳಿಗೆ 11.00 ಗಂಟೆಗೆ** ವಾರ್ಡ್ ನಂ.06 ಥಣಿಸಂದ್ರ ವಾರ್ಡ್ ಸಮಿತಿಯ ನೋಡಲ್ ಅಧಿಕಾರಿಗಳಾದ ಶ್ರೀ ಬಿ.ಎಸ್ ಶ್ರೀಧರ್, ಸ.ಕಾ.ಅ ಬ್ಯಾಟರಾಯನಪುರ ಬಿಬಿಎಂಪಿ ರವರ ಅಧ್ಯಕ್ಷತೆಯಲ್ಲಿ ಹೆಗಡೆನಗರ, 2ನೇ ಮುಖ್ಯರಸ್ತೆ, 4ನೇ ಅಡ್ಡರಸ್ತೆ, ಬಿಬಿಎಂಪಿ ಸಮುದಾಯ ಭವನದಲ್ಲಿ ನಡೆದ ವಾರ್ಡ್ ಸಮಿತಿಯ ಸಭೆಯ ನಡುವಳಿಗಳು

| ಕ್ರ.ಸಂ | ಸಭೆಗೆ ಹಾಜರಾಗಿರುವಅಧಿಕಾರಿಗಳು | ಹುದ್ದೆ |
|---|---|---|
| 1 | ಶ್ರೀ ಬಿ.ಎಸ್ ಶ್ರೀಧರ್ | ನೋಡಲ್ ಅಧಿಕಾರಿಗಳು ವಾರ್ಡ್ ನಂ 06(ಥಣಿಸಂದ್ರ) ಹಾಗೂ ಸ.ಕಾ.ಅ (ಬ್ಯಾ.ಉ.ವಿ), ಬಿಬಿಎಂಪಿ |
| 2 | ಶ್ರೀ ಸುರೇಶ ದೇವತರಾಜ್ | ಸಹಾಯಕ ಅಭಿಯಂತರರು ಹಾಗೂ ಸದಸ್ಯ ಕಾರ್ಯದಶಿ, ವಾರ್ಡ್ ಸಮಿತಿ, ವಾರ್ಡ್ ನಂ 06(ಥಣಿಸಂದ್ರ) |
| 3 | ಡಾ|| ಪೃಥ್ವಿ ಹೆಚ್.ಆರ್ | ವೈದ್ಯಾಧಿಕಾರಿ, ಪ್ರಾ.ಆ.ಕೇಂದ್ರ ಹೆಗಡೆನಗರ |
| 4 | ಶ್ರೀ ಚಂದನ್ | ಸ.ಕಾ.ಅ, ಬಿ.ಡಬ್ಲ್ಯೂ.ಎಸ್.ಎಸ್.ಬಿ (110 ಹಳ್ಳಿಗಳು) |
| 5 | ಶ್ರೀ ಜಿ.ಎನ್ ಶ್ರೀನಿವಾಸ್ | ಸ.ಅ, ಯೋಜನಾ ವಿಭಾಗ, ಯಲಹಂಕ ವಲಯ |
| 6 | ಶ್ರೀ ಸಿ.ಎನ್ ನಂದನ | ಸ.ಅ, ಬಿ.ಡಬ್ಲ್ಯೂ.ಎಸ್.ಎಸ್.ಬಿ (ನಿರ್ವಹಣೆ) |
| 7 | ಶ್ರೀ ಶಶಾಂಕ್ | ಸ.ಅ ರಸ್ತೆ & ಮೂಲಭೂತ ಸೌಕರ್ಯ ವಿಭಾಗ, ಬಿಬಿಎಂಪಿ |
| 8 | ಶ್ರೀ ನಂಜುಡಪ್ಪ | ಹಿ.ಆ. ಪರಿವೀಕ್ಷಕರುವಾರ್ಡ್ ನಂ. 06 (ಥಣಿಸಂದ್ರ) |
| 9 | ಶ್ರೀ ಮಹೇಶ್‌ಕುಮಾರ ಎಲ್. | ಕಿ.ಆ. ಪರಿವೀಕ್ಷಕರುವಾರ್ಡ್ ನಂ. 06 (ಥಣಿಸಂದ್ರ) |
| 10 | ಶ್ರೀ ಮಧು | ಎಲೆಕ್ಟ್ರೀಷನ್, ವಿದ್ಯುತ್ ವಿಭಾಗ, ಬಿಬಿಎಂಪಿ |
| 11 | ಶ್ರೀ ರಾಕೇಶ್ ವಿ | ಮಾರ್ಷಲ್ ವಾರ್ಡ್ ನಂ. 06 |

**ಶ್ರೀ ಸುರೇಶ ದೇವತರಾಜ್** ವಾರ್ಡ್ ಸಮಿತಿ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು ಮಾತನಾಡಿ ಈ ಹಿಂದಿನ 2 ತಿಂಗಳ ವಾರ್ಡ್ ಸಮಿತಿ ಸಭೆಯನ್ನು ನೊಡಲ್ ಅಧಿಕಾರಿಗಳ ಅನಾರೋಗ್ಯ ಕಾರಣದಿಂದ ವಾರ್ಡ್ ಸಮಿತಿ ಸಭೆಯು ನಡೆಸಲು ಸಾಧ್ಯವಾಗಿರುವುದಿಲ್ಲ ಇದರಿಂದ ಸದರಿ ವಾರ್ಡ್ ಸಮಿತಿಗೆ ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಪರಿಷ್ಕೃತ ಕಛೇರಿ ಆದೇಶ ದಿ. 30.04.2022 ರ ಅನ್ವಯ ಹೊಸದಾಗಿ ನೇಮಕಗೊಂಡ ನೋಡಲ್ ಅಧಿಕಾರಿಗಳಾದ ಶ್ರೀ ಬಿ.ಎಸ್ ಶ್ರೀಧರ್, ಸ.ಕಾ.ಅ (ಬ್ಯಾ.ಉ.ವಿ) ಬಿಬಿಎಂಪಿ ರವರಿಗೆ ಹಾಗೂ ಸಭೆಗೆ ಹಾಜರಾಗಿದ್ದ ವಿವಿಧ ಇಲಾಖೆಯ ಅಧಿಕಾರಿಗಳು ಮತ್ತು ವಿವಿಧ ಬಡಾವಣೆಯ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು ಹಾಗೂ ಸಾರ್ವಜನಿಕರಿಗೆ ಸ್ವಾಗತಿಸುವ ಮೂಲಕ ಸಭೆಯನ್ನು ಪ್ರಾರಂಭಿಸುತ್ತಾ ವಾರ್ಡ್ ಸಮಿತಿಯ ಸಭೆಯಲ್ಲಿ ಚರ್ಚಿಸಬೇಕಾದ ಅಜೆಂಡಾ ವಿಷಯದ ಬಗ್ಗೆ ತಿಳಿಸಿದರು.

1. **ಕೋವಿಡ್ –19 ರ ಸಂಬಂಧ ಸೊಂಕು ಹರಡವುದನ್ನು ತಡೆಗಟ್ಟುವ ಸಂಬಂಧ ತೆಗೆದುಕೊಳ್ಳಬೇಕಾದ ಮಂಜಾಗ್ರತ ಕ್ರಮಗಳ ಬಗ್ಗೆ**

    - ಶ್ರೀಮತಿ ಡಾ// ಪೃಥ್ವಿ ಹೆಚ್.ಆರ್, ವೈದ್ಯಾಧಿಕಾರಿಗಳು ಹೆಗಡೆನಗರ ಪ್ರಾಥಮೀಕ ಆರೋಗ್ಯ ಕೇಂದ್ರ ರವರು ಮಾತನಾಡಿ ಹೊಸದಾಗಿ ಹೆಗಡೆಗನರ ಪ್ರಾಥಾಮಿಕ ಆರೋಗ್ಯ ಕೇಂದ್ರಕ್ಕೆ ನಿಯೋಜನೆಗೊಂಡು ಕಾರ್ಯನಿರ್ವಹಿಸುತ್ತಿರುವುದಾಗಿ ತಿಳಿಸಿದರು ಹಾಗೂ ವಾರ್ಡ್ ವ್ಯಾಪ್ತಿಯಲ್ಲಿನ ಸಾರ್ವಜನಿಕರ ಅನುಕೂಲಕ್ಕಾಗಿ ಕೋವಿಡ್ ಸೊಂಕು ಹರಡದಂತೆ ತಡೆಗಟ್ಟುವ ಉದೇಶದಿಂದ ಹೆಚ್ಚುವರಿ ಲಸಿಕೆ

ನೀಡುವ ಅಭಿಯಾನ ನಡೆಯುತ್ತಿದ್ದು ಸಾರ್ವಜನಿಕರು ಈ ಪ್ರಯೋಜನವನ್ನು ಪಡೆಯಬೇಕಾಗಿ ತಿಳಿಸಿದರು.

2. **ವಾರ್ಡ್ ವ್ಯಾಪ್ತಿಯಲ್ಲಿ ಕುಡಿಯುವ ನೀರು ಹಾಗೂ ಒಳಚರಂಡಿಗೆ ಸಂಬಂದಿಸಿದ ವಿಷಯಳ ಬಗ್ಗೆ.**

- **ಶ್ರೀ ಶಿವಯ್ಯ, ಹೆಗಡೆನಗರ ರವರು** ಮಾತನಾಡಿ ಈಗಾಲೇ ಬಿಬಿಎಂಪಿ ವತಿಯಿಮದ ಹೆಗಡೆನಗರದಲ್ಲಿ ಕೊಳವೆ ಬಾವಿಗಳನ್ನು ಹೊಸದಾಗಿ ಕೊರೆದು ಪಂಪು ಮೋಟಾರ್ ಅಳವಡಿಸಿ ನೀರು ಸರಬರಾಜು ಮಾಡುತ್ತಿದ್ದು ಇದರಿಂದ ಹೆಗಡೆನಗರ ನಿವಾಸಿಗಳಿಗೆ ತುಂಬ ಅನುಕೂಲವಾಗಿರುತ್ತದೆ ಆದುದರಿಂದ ಪಾಲಿಕೆಯ ಅಧಿಕಾರಿಗಳಿಗೆ ಧನ್ಯವಾದ ವ್ಯಕ್ತಪಡಿಸಿದರು.
- **ವಾಜಿದ್ ಬಡಾವಣೆಯ ನಿವಾಸಿಗಳು ಮಾತನಾಡಿ :** ಬಡಾವಣೆಯ ಕುಡಿಯುವ ನೀರಿನ ಬೋರ್‌ವೆಲ್ ರಿಪೇರಿಯಾಗಿದ್ದು ಕೂಡಲೇ ದುರಸ್ಥಿ ಪಡಿಸಲು ಕೋರಿದರು ಹಾಗೂ ಬಡಾವಣೆಯ ರಸ್ತೆ ಬದಿ ಚರಂಡಿಗಳಲ್ಲಿ ಹೂಳು ತುಂಬಿದ್ದು ಕೂಡಲೇ ಹೂಳುತೆಗೆದು ನೀರು ಸರಾಗವಾಗಿ ಹರಿಯುವಂತೆ ಕ್ರಮ ವಹಿಸಲು ಕೋರಿದರು.
- **ಶ್ರೀ ದಾಸಪ್ಪ ಹೆಗಡೆನಗರ ರವರು ಮಾತನಾಡಿ:** ಹೆಗಡೆನಗರ ಮುಖ್ಯರಸ್ತೆ ಪೂರ್ವ ಭಾಗ ಹೊಂದಿಕೊಂಡಂತೆ ಇರುವ ಅಡ್ಡರಸ್ತೆಗಳಲ್ಲಿ ಈಗಾಗಲೇ ಬಿಬಿಎಂಪಿ ವತಿಯಿಂದ ರಸ್ತೆಗಳನ್ನು ಅಭಿವೃದ್ದಿಪಡಿಸಲಾಗುತ್ತಿದ್ದು, ಸದರಿ ರಸ್ತೆಗಳಲ್ಲಿ ಒಳಚರಂಡಿಯ ಛೇಂಬರ್‌ಗಳು ರಸ್ತೆ ಮಟ್ಟಕಿಂತ ಕೆಳಗೆ ಇರುವ ಕಾರಣ ಈ ಛೇಂಬರ್‌ಗಳನ್ನು ರಸ್ತೆ ಮಟ್ಟಕ್ಕೆ ಮೇಲೇರಿಸಲು ಕೊರಿದರು.
- **ಸ.ಅ, ವಾರ್ಡ್ 06** ರವರು ಮಾತನಾಡಿ ದಾಸರಹಳ್ಳಿ ಗ್ರಾಮ ಭುವನೇಶ್ವರಿನಗರದ 15ನೇ ಎ ಅಡ್ಡರಸ್ತೆಯಿಂದ 17ನೇ ಎ ಅಡ್ಡರಸ್ತೆವರೆಗೆ ಬಾಕಿ ಇರುವ ಒಳಚರಂಡಿಯ ಕಾಮಗಾರಿಯನ್ನು ಕೂಡಲೇ ಪೂರ್ಣಗೊಳಿಸಿದಲ್ಲಿ ರಸ್ತೆ ಅಭಿವೃದ್ದಿ ಕಾರ್ಯವನ್ನು ಕೈಗೊಳ್ಳಲಾಗುವುದೆಂದು ಸಭೆಗೆ ತಿಳಿಸಿದರು. ಹಾಗೂ ಹೆಗಡೆನಗರದಲ್ಲಿ ಬಾಕಿ ಇರುವ ಒಳಚರಂಡಿ ಕಾಮಗಾರಿಯನ್ನು ಕೂಡಲೇ ಪೂರ್ಣಗೊಳಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಕೋರಿದರು.

3. **ವಾರ್ಡ್ ವ್ಯಾಪ್ತಿಯಲ್ಲಿ ಘನತ್ಯಾಜ್ಯ ಸಂಗ್ರಹಣೆ ಮತ್ತು ವಿಲೇವಾರಿ ಬಗ್ಗೆ**

- **ಶ್ರೀ ದಾಸಪ್ಪ ರವರು ಮಾತನಾಡಿ :** ವಾರ್ಡ್ ನಂ. 06ರಲ್ಲಿ ಬರುವ ಹೆಗಡೆನಗರ ಪೂರ್ವ ಮತ್ತು ಪಶ್ಚಿಮ ಭಾಗದಲ್ಲಿ ಘನತ್ಯಾಜ್ಯ ಸಂಗ್ರಹಣೆ ಮತ್ತು ವಿಲೇವಾರಿಯನ್ನು ಸರಿಯಾಗಿ ಆಗುತ್ತಿರುವುದಿಲ್ಲ ಹಾಗೂ ಹೆಗಡೆನಗರ ಆರೋಗ್ಯ ಕೇಂದ್ರದ ಹತ್ತಿರ ಇರುವ ಬ್ಲಾಕ್ ಸ್ಪಾಟ್‌ಅಲ್ಲಿ ಅಕ್ಕ ಪಕ್ಕದ ಅಂಗಡಿಯವರು ಕಸವನ್ನು ಸುರಿಯುತ್ತಿದ್ದು ಇದರಿಂದ ವಾಸನೆ ಬರುತ್ತಿರುವುದಲ್ಲದೇ ಸಾರ್ವಜನಿಕರ ಆರೋಗ್ಯಕ್ಕೆ ತೊಂದರೆಯಾಗುತ್ತಿರುತ್ತದೆ ಈ ಬಗ್ಗೆ ಪರಿಶೀಲಿಸಿ ಕ್ರಮ ವಹಿಸಲು ಕೋರಿದರು ಹಾಗೂ ಹಿರಿಯ ಆರೋಗ್ಯ ಪರಿವೀಕ್ಷಕರು ಪರಿಶೀಲಿಸಿ ನೋಟಿಸ್ ಜಾರಿ ಮಾಡಲು ಹಾಗೂ ದಂಡವನ್ನು ವಿಧಿಸಲು ಕೋರಿದರು.
- ಭುವನೇಶ್ವರಿನಗರ ಕ್ಷೇಮಾಭಿವೃದ್ದಿ ಸಂಘದವರು ಮಾತನಾಡಿ 18ನೇ ಅಡ್ಡರಸ್ತೆಗೆ ರಸ್ತೆ ಗುಡಿಸಲು ಬರುತ್ತಿರುವುದಿಲ ಆದ್ದರಿಂದ ಕಿ.ಅ.ಪ ರವರು ಪರಿಶೀಲಿಸಿ ಕ್ರಮ ಜರುಗಿಸಲು ಕೋರಿದರು.
- ಭುವನೇಶ್ವರಿನಗರದಲ್ಲಿ ಹಿಂದಿನ 15 ದಿನಗಳಿಂದ ಘನತ್ಯಾಜ್ಯ ಸಂಗ್ರಹಣೆ ಮತ್ತು ವಿಲೇವಾರಿ ಕಾರ್ಯ ಸಮರ್ಪಕವಾಗಿ ನಡೆಯುತ್ತಿರುವುದಿಲ್ಲವೆಂದು ತಿಳಿಸಿದರು.

4. **ವಾರ್ಡ್ ವ್ಯಾಪ್ತಿಯಲ್ಲಿ ಬೀದಿ ದೀಪಗಳ ನಿರ್ವಹಣೆ ಬಗ್ಗೆ.**

- ವಾರ್ಡ್ ವ್ಯಾಪ್ತಿಯಲ್ಲಿ ಕೆಲವು ಪ್ರದೇಶಗಳಲ್ಲಿ ಎಲ್.ಇ.ಡಿ ದೀಪಗಳನ್ನು ಅಳವಡಿಸಲಾಗುತ್ತಿದ್ದು, ಹೆಗಡೆಗನರ ಹಾಗೂ ಭುವನೇಶ್ವರಿನಗರದಲ್ಲಿ ಬೀದಿ ದೀಪಗಳ ಸರ್ವೆ ಕಾರ್ಯ ನಡೆಸಿ ಬೀದಿ ದೀಪಗಳು ಇಲ್ಲದೇ ಇರುವ ಕಡೆಗಳಿಗೆ ಹೊಸದಾಗಿ ಎಲ್.ಇ.ಡಿ ದೀಪಗಳನ್ನು ಅಳವಡಿಸಲು ಸಂಬಂಧಪಟ್ಟ ಅಧಿಕಾರಿಗಳು ಕ್ರಮ ವಹಿಸಲು ಸಾರ್ವಜನಿಕರು ಕೋರಿದರು.

5. **ಇನ್ನಿತರೆ ವಿಷಯಗಳು ಮಾನ್ಯ ನೋಡಲ್ ಅಧಿಕಾರಿಗಳ ಅಪ್ಪಣೆ ಮೇರೆಗೆ**

- **ವಾರ್ಡ್ ಅಭಿಯಂತರರು** ಮಾತನಾಡಿ ದಿನಾಂಕ 17-05-2022 ರಂದು ರಾತ್ರೀ ಬಿದ್ದ ಭಾರಿ ಮಳೆಗೆ ವಾರ್ಡ್ ನಂ 06 ವ್ಯಾಪ್ತಿಯಲ್ಲಿ ಬರುವ ದಾಸರಹಳ್ಳಿ ಎಕ್ಸ್‌ಟೆನ್ಷನ್, ಡಿಫೇನ್ಸ್ ಬಡಾವಣೆ, ಡೈನಸ್ಟಿ ಬಡವಣೆ, ಫಾತಿಮ ಬಡವಣೆ, ಟುಬಾ ಬಡಾವಣೆ, ಮಂಜುನಾಥ ಬಡಾವಣೆ ಹಾಗೂ ಶಬರಿನಗರ ಬಡಾವಣೆಗಳಲ್ಲಿ ಮನೆಗಳಿಗೆ ಮಳೆ ನೀರು ನುಗ್ಗಿರುತ್ತದೆ. ಹಾಗೂ ಎಂ.ಎಸ್. ರಾಮಯ್ಯ ಬಡವಣೆಗೆ ನೀರು ನುಗ್ಗಿರುತ್ತದೆ. ಎಂದು ಸಭೆಗೆ ತಿಳಿಸಿದರು ಹಾಗೂ ಮಳೆ ನೀರು ನುಗ್ಗಿರುವ ಮನೆಗಳಿಂದ ಹಾಗೂ ರಸ್ತೆಗಳಲ್ಲಿ ನಿಂತಿರುವ ನೀರನ್ನು ಬಿ.ಬಿ.ಎಂ.ಪಿ ವತಿಯಿಂದ ಪಂಪುಗಳನ್ನು ಅಳವಡಿಸಿ ನೀರು ಹೊರಗೆ ತೆಗೆದುಹಾಕಲಾಗಿರುತ್ತದೆ ಹಾಗೂ ಮನೆಗಳಿಗೆ ಮಳೆ ನೀರು ನುಗ್ಗಿರುವ ಬಗ್ಗೆ ಸರ್ವೇ ಕಾರ್ಯವನ್ನು ಪಾಲಿಕೆಯ ಕಂದಾಯ ಇಲಾಖೆಯಿಂದ ಕೈಗೊಳ್ಳಲಾಗುತ್ತಿರುತ್ತದೆ ಎಂದು ತಿಳಿಸಿದರು.
- **ಎಂ.ಎಸ್ ರಾಮಯ್ಯ ನಾರ್ಥ್‌ಸಿಟಿ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು** ಮಾತನಾಡಿ ಬಾರಿ ಮಳೆ ಬಂದಾಗ ಎಂ.ಎಸ್ ರಾಮಯ್ಯ ಬಡಾವಣೆಗೆ 3-4 ಕಡೆಯಿಂದ ಮಳೆ ನೀರು ಬರುತ್ತಿದ್ದು, ಮಳೆ ನೀರನ್ನು ಹೊರಗಡೆ ಹಾಕಲು ಇನ್ನೊಂದು ಟ್ಯಾಂಕ್ ಅನ್ನು ನಿರ್ಮಿಸಿ ಪಂಪು ಮೋಟಾರ್ ಅಳವಡಿಸುವುದು ಅವಶ್ಯಕವಾಗಿರುತ್ತದೆ ಎಂದು, ಚರಂಢಿಗಳಲ್ಲಿ ಹೂಳು ತೆಗೆಯುವುದು ಹಾಗೂ ಕೆಲವು ಕಡೆಗಳಲ್ಲಿ ಕಲ್ವರ್ಟ್‌ಗಳ ನಿರ್ಮಾಣ ಮಾಡುವುದು, ಮಳೆ ನೀರು ಚರಂಡಿಗೆ ಬಾಕಿ ಇರುವ ಕಡೆ ತಡೆ ಗೋಡೆ ನಿರ್ಮಾಣ ಮಾಡುವುದು. ಹಾಗೂ ಬಡಾವಣೆಯ ರಸ್ತೆ ಪಕ್ಕದಲ್ಲಿ ಬೆಳೆದಿರುವ ಮರಗಳ ಕೊಂಬೆಗಳನ್ನು ಕತ್ತರಿಸಲು ಅಗತ್ಯ ಕ್ರಮ ಜರುಗಿಸಲು ಕೋರಿದರು. ಹಾಗೂ ಸದರಿ ಬಡಾವನೆಯಲ್ಲಿ ಒಂದು ರಸ್ತೆ ತುಂಬ ಹಾಳಾಗಿರುವುದರಿಂದ ಮರು ಡಾಂಬರೀಕರಣ ಮಾಡಲು ಕೋರಿದರು.
- **ಭುವನೇಶ್ವರಿನಗರ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು ಮಾತನಾಡಿ:** ಭುವನೇಶ್ವರಿನಗರ 3ನೇ ಕ್ರಾಸ್‌ನಿಂದ 14ನೇ ಕ್ರಾಸ್ ವರೆಗೆ ರಸ್ತೆಗಳಿಗೆ ಡಾಂಬರೀಕರಣ ಮಾಡಲು ಹಾಗೂ 15 ಎ ನೇ ಕ್ರಾಸ್‌ನಿಂದ 18ನೇ ಎ ಕ್ರಾಸ್ ವರೆಗೆ ರಸ್ತೆಗಳು ಸಹ ಅಭಿವೃದ್ಧಿಪಡಿಸಲು ಹಾಗೂ ಬಡಾವಣೆಯಲ್ಲಿ ರಸ್ತೆ ಪಕ್ಕದಲ್ಲಿ ಬೆಳೆದಿರುವ ಮರದ ಕೊಂಬೆಗಳನ್ನು ಕತ್ತರಿಸಲು ಕೋರಿದರು. ಭುವನೇಶ್ವರಿನಗರ ಮುಖ್ಯರಸ್ತೆಯಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ ವತಿಯಿಂದ ರಸ್ತೆಯನ್ನು ಒಳಚರಂಡಿ ಕೊಳವೆ ಸಾಲುಗಳನ್ನು ಅಳವಡಿಸಲು ಅಗೆತ ಮಾಡಿದ್ದು, ಸಾರ್ವಜನಿಕರು ಓಡಾಡಲು ತೊಂದರೆಯಾಗಿರುವುದರಿಂದ ಕೂಡಲೇ ಪ್ಯಾಚ್ ವರ್ಕ್ ಮಾಡಲು ಕೋರಿದರು.
- **ಶ್ರೀ ಕುಲಕರ್ಣಿ, ಭುವನೇಶ್ವರಿನಗರ ರವರು ಮಾತನಾಡಿ:** ಭುವನೇಶ್ವರಿನಗರ 9ನೇ ಕ್ರಾಸ್‌ನಲ್ಲಿ ಸಮರ್ಪಕವಾದ ಚರಂಡಿ ಇಲ್ಲದೇ ಇರುವುದರಿಂದ ಹೊಸದಾಗಿ ಚರಂಢಿ ನಿರ್ಮಾಣ ಮಾಡುವುದು ಅವಶ್ಯಕವಾಗಿದೆ ಎಂದು ಹಾಗೂ ಬಡಾವಣೆಯಲ್ಲಿ ನಾಮ ಫಲಕಗಳು ಇಲ್ಲದೇ ಇರುವುದರಿಂದ ಹೊಸದಾಗಿ ನಾಮಫಲಕಗಳನ್ನು ಅಳವಡಿಸಲು ಕೋರಿದರು.
- **ಶ್ರೀ ನವೀನ್, ಭುವನೇಶ್ವರಿನಗರ ರವರು ಮಾತನಾಡಿ:** ಭುವನೇಶ್ವರಿನಗರ ಬಡಾವಣೆಯಲ್ಲಿ ಈಗಾಗಲೇ ಬಹಳಷ್ಟು ಅಡ್ಡರಸ್ತೆಗಳಿಗೆ ವೆಟ್‌ಮಿಕ್ಸ್ ಅಳವಡಿಸಿದ್ದು, ಕೂಡಲೇ ಡಾಂಬರೀಕರಣ ಕಾಮಗಾರಿಯನ್ನು ಕೈಗೊಳ್ಳಲು ಕೋರಿದರು.
- **ದಾಸಪ್ಪ ಹೆಗಡೆನಗರರವರು** ಮಾತನಾಡಿ ಹೆಗಡೆನಗರದ 4ನೇ ಮುಖ್ಯರಸ್ತೆಯಲ್ಲಿ ಒಳಚರಂಡಿ ಛೇಂಬರ್ ತುಂಬಿ ರಸ್ತೆ ಮೇಲೆ ನೀರು ಹರಿಯುತ್ತಿದ್ದು ಈ ಸಂಭಂಧ ಬಿ.ಡಬ್ಲ್ಯೂ.ಎಸ್.ಎಸ್.ಬಿ ಸ.ಅ ಹಾಗೂ ಸ.ಕಾ.ಅ ರವರಿಗೆ ಕರೆ ಮಾಡಿ ತಿಳಿಸಿದ್ದರೂ ಸಹ ಕ್ರಮ ವಹಿಸುತ್ತಿರುವುದಿಲ್ಲವೆಂದು ಸಭೆಗೆ ತಿಳಿಸಿದರು. ಹಾಗೂ ವಾರ್ಡ್ ಸಮಿತಿ ಸಭೆಗೆ ಪೋಲಿಸ್ ಇಲಾಖೆಯ ಟ್ರಾಫಿಕ್, ಕಾನೂನು ಸುವೆವಸ್ಥೆಯಿಂದ ಯಾವುದೇ ಅಧಿಕಾರಿಗಳೂ ಸಭೆಗೆ ಹಾಜರಿಯಾಗಿರುವುದಿಲ್ಲ ಈ ಬಗ್ಗೆ ನೊಡೆಲ್ ಅಧಿಕಾರಿಗಳು ಕ್ರಮ ವಹಿಸಲು ಕೋರಿದರು.
- **ಶ್ರೀನಿವಾಸರಾವ್ ಅಮರಜ್ಯೋತಿನಗರ** ರವರು ಮಾತನಾಡಿ ಮಳೆ ನೀರು ಚರಂಡಿಯಲ್ಲಿ ತುಂಬಿರುವ ಹೂಳನ್ನು ತೆಗೆದು ಹೊರಸಾಗಿಸಲು ಕೋರಿದರು. ಹಾಗೂ ವಾರ್ಡ್ ಸಮಿತಿ ಸಭೆಗೆ ಕೆಲವು

ಅಧಿಕಾರಿಗಳು ಗೈರು ಹಾಜರಿಯಾಗುತ್ತಿದ್ದು ಇದರಿಂದ ಸಾರ್ವಜನಿಕರಿಗೆ ತಮ್ಮ ತೊಂದರೆಗಳನ್ನು ಗಮನಕ್ಕೆ ತಂದು ಪರಿಹಾರ ಕಂಡುಕೊಳ್ಳಲು ಸಾಧ್ಯವಾಗುತ್ತಿರುವುದಿಲ್ಲ ಆದ್ದರಿಂದ ನೋಡೆಲ್ ಅಧಿಕಾರಿಗಳು ಮುಂದಿನ ಸಭೆಗೆ ಎಲ್ಲಾ ಇಲಾಖೆಯ ಅಧಿಕಾರಿಗಳು ಹಾಜರಿರುವಂತೆ ಕ್ರಮ ವಹಿಸಲು ಕೋರಿದರು. ಹಾಗೂ ಈ ಹಿಂದಿನ ಸಭೆಗಳಲ್ಲಿ ಚರ್ಚಿಸಿದ ವಿಷಯಗಳ ಬಗ್ಗೆ ತೆಗೆದುಕೊಂಡ ಕ್ರಮದ ಮಾಹಿತಿಯನ್ನು ಮುಂದಿನ ಸಭೆಗೆ ತಿಳಿಸಲು ಕ್ರಮ ವಹಿಸಲು ಕೋರಿದರು.

ಕೊನೆಯದಾಗಿ ಮಾನ್ಯ ನೋಡಲ್ ಅಧಿಕಾರಿಗಳು ಹಾಗೂ ಸ.ಕಾ.ಅ (ಬ್ಯಾ.ಉ.ವಿ) ರವರು ಮಾತನಾಡಿ ಮೇಲ್ಕಂಡಂತೆ ಸಭೆಯಲ್ಲಿ ಚರ್ಚಿಸಿರುವ ಎಲ್ಲಾ ವಿಷಯಗಳನ್ನು ಗಂಬೀರವಾಗಿ ಪರಿಗಣಿಸಿ ಎಲ್ಲಾದೂರು ಮತ್ತು ಸಲಹೆ ಮತ್ತು ಸೂಚನೆಗಳನ್ನು ಕಾರ್ಯರೂಪಕ್ಕೆ ತರಲು ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಅಗತ್ಯಕ್ರಮ ಕೈಗೊಳ್ಳುವಂತೆ ಸೂಚಿಸಿದರು ಹಾಗೂ ಸಭೆಯಲ್ಲಿ ಹಾಜರಿದ್ದ ಎಲ್ಲಾ ವಾಟರ್‌ಮ್ಯಾನ್‌ಗಳಿಗೆ ಕುಡಿಯುವ ನೀರಿನ ಸರಬರಾಜು ಮತ್ತು ನಿರ್ವಹಣೆಯನ್ನು ಸಮರ್ಪಕವಾಗಿ ನಿರ್ವಹಿಸಲು ಸೂಚನೆ ನೀಡುತ್ತಾ ಸಭೆಗೆ ಹಾಜರಾಗಿದ್ದ ಎಲ್ಲಾ ಅಧಿಕಾರಿಗಳಿಗೆ ಹಾಗೂ ವಿವಿಧ ಬಡಾವಣೆ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು ಹಾಗೂ ಹಾಜರಾಗಿರುವ ಸಾರ್ವಜನಿಕರಿಗೆ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

21.05.2022

ಕಾರ್ಯದರ್ಶಿ
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ನಂ. 06, (ಥಣಿಸಂದ್ರ)

21/5/2022

ನೋಡಲ್ ಅಧಿಕಾರಿಗಳು
ವಾರ್ಡ್ ಸಮಿತಿ, ವಾರ್ಡ್ ನಂ. 06(ಥಣಿಸಂದ್ರ)
ಹಾಗೂ ಸ.ಕಾ.ಅ (ಬ್ಯಾ.ಉ.ವಿ)

ಪ್ರತಿಯನ್ನು.

1. ಕೌನ್ಸಿಲ್ ಕಾರ್ಯದರ್ಶಿ, ಬಿಬಿಎಂಪಿ ಕೇಂದ್ರಕಛೇರಿ, ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಜಂಟಿಆಯುಕ್ತರು, ಯಲಹಂಕ ವಲಯರವರಿಗೆ ಅವಗಾಹನೆಗೆ ಸಲ್ಲಿಸಿದೆ.
3. ಮುಖ್ಯಅಭಿಯಂತರರು, ಯಲಹಂಕ ವಲಯರವರಿಗೆ ಅವಗಾಹನೆಗೆ ಸಲ್ಲಿಸಿದೆ.
4. ಕಂದಾಯ ಅಧಿಕಾರಿಗಳು (ಯಲಹಂಕ) ಬೆಂಗಳೂರು ರವರ ಅವಗಾಹನೆಗೆ ಸಲ್ಲಿಸಿದೆ.
5. ಕಾರ್ಯಪಾಲಕಅಭಿಯಂತರರು, ಬ್ಯಾಟರಾಯನಪುರ ವಿಭಾಗರವರಿಗೆ ಸಲ್ಲಸಿದೆ
6. ಕಛೇರಿಕಡತಕ್ಕೆ.